# *ಕನ್ನಡದಲ್ಲಿ ಜನಪ್ರಿಯ ವಿಜ್ಞಾನ, ತಂತ್ರಜ್ಞಾನ ಸಾಹಿತ್ಯ* *

*ಎಂ. ಎಸ್. ಶ್ರೀಧರ್*

ಶ್ರೀಸಾಮಾನ್ಯನಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗಿನ ಅರಿವು ಪತ್ರಿಕೆ ಮತ್ತಿತರ ಮಾಧ್ಯಮಗಳ ಮೂಲಕ ಕುತೂಹಲ ಕೆರಳಿಸುವಷ್ಟಾದರು ಆಗುತ್ತಿದೆ. ಕುತೂಹಲ ತಣಿಸಲು ಮತ್ತು ಜೀವನದ ಅವಶ್ಯಕತೆಗಳಿಗೆ ಸಂಬಂಧಿಸಿದಷ್ಟಾದರು ತಂತ್ರಜ್ಞಾನ ಮತ್ತು ವಿಜ್ಞಾನ ವಿಷಯ ಅರಿಯಲು ನಮಗೆ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಮತ್ತು ಪತ್ರಿಕೆಗಳು ಅವಶ್ಯಕ. ಇಲ್ಲಿ 'ಜನಪ್ರಿಯ' ಅಂದರೆ ತಜ್ಞನಲ್ಲದ ಶ್ರೀಸಾಮಾನ್ಯ ಸುಲಭದಲ್ಲಿ ಗ್ರಹಿಸುವ ರೀತಿಯಲ್ಲಿ, ಅಂದರೆ ಕನಿಷ್ಠ ತಾಂತ್ರಿಕ ಭಾಷೆ, ಸಂಕೇತ ಮತ್ತು ಸಂಕೀರ್ಣತೆ, ಹೆಚ್ಚು ವಿವರಣೆ, ಚಿತ್ರ ಮತ್ತು ಆಕರ್ಷಕ ನಿರೂಪಣೆ ಹೊಂದಿದ್ದು ಶ್ರೀಸಾಮಾನ್ಯನ ಅವಶ್ಯಕತೆ ಮತ್ತು ಉಪಯುಕ್ತತೆಗನುಗುಣವಾಗಿ ಪ್ರಕಟಿಸಿರುವ ಲೇಖನ ಮತ್ತು ಪುಸ್ತಕ ಎನ್ನಬಹುದು. ಈ ರೀತಿಯ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಾಹಿತ್ಯವು ಹೆಚ್ಚಾಗಿ ಸಾಮಾನ್ಯ ವಿಜ್ಞಾನ ಸಾಹಿತ್ಯ, ವಿಸ್ತಾರಣಾಕಾರ್ಯಗಳಲ್ಲಿ ಬಳಸುವ ಕೈಪಿಡಿಗಳು, ಕಸುಬಿಗೆ ಸಂಬಂಧಿಸಿದ ತಾಂತ್ರಿಕ ಪುಸ್ತಕಗಳು, ದಿನಪತ್ರಿಕೆಗಳ ಪುರವಣಿಗಳಲ್ಲಿ, ವಿಶ್ವಕೋಶ ಮತ್ತಿತರ ಸಂದರ್ಭಸೇವಾ (ಪರಾಮರ್ಶನ ಅಥವ ಆಕರ) ಗ್ರಂಥಗಳಲ್ಲಿ, 'ಜನಪ್ರಿಯ' ವಿಜ್ಞಾನ ನಿಯತಕಾಲಿಕೆ ಹಾಗು ಪುಸ್ತಕಗಳಲ್ಲಿ ರೂಪುಗೊಂಡಿದೆ.

ನಾವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿದ್ದೇವೆ. ನಮ್ಮ ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಈ ಕ್ಷೇತ್ರದ ಕೊಡುಗೆಗಳು ನೇರವಾಗಿ ಮತ್ತು ಪರೋಕ್ಷವಾಗಿ ಹಾಗೂ ನಿರಂತರವಾಗಿ ಶ್ರೀಸಾಮಾನ್ಯನನ್ನು ತಲುಪುತ್ತಲಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ ವಲಯದಿಂದ ಹೊರಗೆ ನಾಗರಿಕ ಬದುಕುವುದನ್ನು ಇಂದು ಕಲ್ಪಿಸಲೂ ಸಾಧ್ಯವಿಲ್ಲ. ಆದ್ದರಿಂದ ಇಂದು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಆಯಾಕ್ಷೇತ್ರದ ತಜ್ಞರಿಗೆ ಮಾತ್ರ ಸಂಬಂಧಪಟ್ಟ ವಿಷಯ ಎಂದು ಪರಿಗಣಿಸಿ ನಾವು ದೂರವಿಡುವಂತಿಲ್ಲ. ವಿಜ್ಞಾನಕ್ಕೆ ಹಲವು ಶತಮಾನಗಳ ರೋಚಕ ಇತಿಹಾಸವಿದೆ. ಅದು ಧರ್ಮ ಮತ್ತು ಪ್ರಭುತ್ವಗಳು ಒಡ್ಡಿದ ಪ್ರಭಲ ವಿರೋಧವನ್ನು ಎದುರಿಸಿ, ಮೌಢ್ಯವನ್ನು ಅವಿಚ್ಛಿನ್ನವಾಗಿ ಖಂಡಿಸಿ, ತಂತ್ರಜ್ಞಾನಗಳ ಬೆಳವಣಿಗೆಗೆ ಬೆನ್ನೆಲುಬಾಗಿ ಎಲ್ಲರನ್ನು, ಎಲ್ಲವನ್ನು ಒಳಗೊಂಡ ಒಂದು ನಿರಂತರ ಮತ್ತು ದೈತ್ಯ ಪ್ರವಾಹವಾಗಿ ಸದಾ ಬದಲಾವಣೆಗಳನ್ನು ಸ್ವೀಕರಿಸುತ್ತ ದಾಪುಗಾಲಿನ ಪ್ರಗತಿಯನ್ನು ಸಾಧಿಸಿದೆ.

***ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಾಹಿತ್ಯದ ಅವಶ್ಯಕತೆ:*** ಹಲವಾರು ಕಾರಣಗಳಿಗಾಗಿ ನಾವು ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯವನ್ನು/ ಮಾಹಿತಿಯನ್ನು ಬಯಸುತ್ತೇವೆ. ಈ ಮೊದಲೆ ತಿಳಿಸಿದಂತೆ ನಿಗೂಢತೆಯಿಂದ ಉಂಟಾದ ಕುತೂಹಲ, ವಿಸ್ಮಯ ಮತ್ತು ಜ್ಞಾನಧಾಹ ತಣಿಸಲಿಕ್ಕೆ ಮತ್ತು ಅದರಿಂದಾಗಿ ದೊರೆಯುವ ಆತ್ಮ ತೃಪ್ತಿಗೆ *ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಾಹಿತ್ಯ ಆವಶ್ಯಕ.* ನಮ್ಮಲ್ಲಿ ಸ್ವಾಭಾವಿಕವಾಗಿ ಉಂಟಾಗುವ ಅನುಮಾನ ಮತ್ತು ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳುವುದಕ್ಕೆ ಹಾಗು ನಿತ್ಯ ಬದುಕಿನ ಅವಶ್ಯಕತೆಗಳ ಬಗ್ಗೆ ಮಾಹಿತಿ ಮತ್ತು ತಿಳುವಳಿಕೆ ಪಡೆಯಲು ಕೂಡ ಜನಪ್ರಿಯ ವಿಜ್ಞಾನ ಬೇಕಾಗುತ್ತದೆ. ಉದಾಹರಣೆಗೆ ನಾವು ಉಪಯೋಗಿಸುವ ವಸ್ತು ಮತ್ತು ಸಲಕರಣೆಗಳ ಇತಿಮಿತಿ ಮತ್ತು ಉಪಯೋಗಗಳನ್ನು ತಿಳಿಯಲು ಸ್ವಲ್ಪ ಜ್ಞಾನ ಅವಶ್ಯಕ.

ಅಂತೆಯೆ ಪರಿಸರ, ಜೀವವೈವಿಧ್ಯತೆ, ಪ್ರಗತಿ, ಇತ್ಯಾದಿ ಸಾಮಾಜಿಕ ಕಳಕಳಿ ಬಗ್ಗೆ ಎಚ್ಚರ ಮೂಡಿಸುವಲ್ಲಿ ಜನಪ್ರಿಯ ವಿಜ್ಞಾನದ ಕೊಡುಗೆ ಶ್ಲಾಘನೀಯ. ರಾಷ್ಟ್ರ ನೀತಿ ಸಂಹಿತೆ ಸ್ವರೂಪ, ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆ, ಭವಿಷ್ಯದ ಬೆಳವಣಿಗೆಯ ದಿಕ್ಕು ಇತರ ವಿಜ್ಞಾನ ಚಟುವಟಿಕೆಗಳ ಮತ್ತು ಸಂಶೋಧನೆಗಳ ಪರಿಚಯ ಮಾಡಿಕೊಳ್ಳಲು, ಸಾಮಾಜಿಕ ಪ್ರಸ್ತುತತೆ ಅರಿಯಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು, ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳ ಮೊರೆ ಹೋಗಲೇ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ವಿಜ್ಞಾನಿಗಳ/ತಂತ್ರಜ್ಞರ ಮತ್ತು ನಾಗರೀಕರ ನಡುವಣ ಅಂತರವನ್ನು ಕಡಿಮೆ ಮಾಡಿ ವೈಜ್ಞಾನಿಕ ಮನೋಧರ್ಮ, ದೃಷ್ಟಿ ಮತ್ತು ಸಂಸ್ಕಾರ ಹಾಗು ಸ್ವತಂತ್ರ ವಿಚಾರಪರತೆ ಬೆಳೆಸುವುದರ ಮೂಲಕ ಮೂಢನಂಬಿಕೆಗಳ ನಿರ್ಮೂಲನೆ ಮಾಡಿ ವಿಜ್ಞಾನ ಸಾಕ್ಷರತೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ಶ್ರೀಸಾಮಾನ್ಯನಿಗೆ ಹಿಂದೆಂದಿಗಿಂತಲೂ ಇಂದು ತುರ್ತಾಗಿ ಬೇಕಾಗಿದೆ.

ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಮಾಹಿತಿ ಪ್ರಸಾರದಲ್ಲಿ ಸಂವಹನ ಮಾಧ್ಯಮಗಳಾದ ಬಾನುಲಿ, ದೂರದರ್ಶನ, ಉತ್ಸವ, ತರಬೇತಿ ಕಾರ್ಯಾಗಾರ, ಜಾಥ, ಪ್ರದರ್ಶನ, ಸಂಗ್ರಹಾಲಯ, ತಜ್ಞರ ಉಪನ್ಯಾಸಗಳು, ವಿಸ್ತರಣಾ ಚಟುವಟಿಕೆಗಳು, ಮಾರ್ಗದರ್ಶನಗಳು ಮತ್ತು ಪತ್ರಿಕೆಗಳ ಮತ್ತು ನಿಯತಕಾಲಿಕೆಗಳ ಲೇಖನಗಳು ಗಮನಾರ್ಹವಾದ ಕಾರ್ಯಸಾಧಿಸಿದ್ದು ಗುರುತರ ಜವಾಬ್ದಾರಿ ಹೊಂದಿದ್ದರೂ ಈ ಕಾರ್ಯದಲ್ಲಿ ಪುಸ್ತಕಗಳು ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದಿವೆ.

***ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಸಾಹಿತ್ಯದ ಮೈಲಿಗಲ್ಲುಗಳು:*** ಇಂತಹ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು (ಕನ್ನಡದಲ್ಲಿ) ಶ್ರೀಸಾಮಾನ್ಯನಿಗೆ ಎಷ್ಟರಮಟ್ಟಿಗೆ ಲಭ್ಯವಿವೆ? ಅಂತಹ ಪುಸ್ತಕಗಳೆಷ್ಟಿವೆ? ಯಾವಯಾವ ವಿಷಯದ ಬಗ್ಗೆ ಇವೆ? ಎಲ್ಲಿ ದೊರೆಯುತ್ತವೆ? ಎನ್ನುವ ಪ್ರಶ್ನೆಗಳು ಸಹಜ. ಸುಮಾರು ೧೫೦ ವರ್ಷಗಳಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ ಹೆಚ್ಚಾಗಿ ಇಂಗ್ಲೀಷಿನಲ್ಲಿ ಮುಂದುವರೆದ ದೇಶಗಳಲ್ಲಿ ಸೀಮಿತ ಸುಶಿಕ್ಷಿತರನ್ನು ಮಾತ್ರ ತಲುಪಿದೆ. ಅದೇ ಕಾರ್ಯ ಕನ್ನಡದಲ್ಲಿ ಸುಮಾರು ೧೨೦ ವರ್ಷಗಳ ಹಿಂದೆ ಆರಂಭವಾಗಿ ಇದುವರೆವಿಗೆ ಸುಮಾರು ೩೦೦೦ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿವೆ ಎನ್ನುವುದು ಆಶ್ಚರ್ಯ ಮತ್ತು ಸಂತೋಷಗಳೆರಡನ್ನು ಉಂಟು ಮಾಡುವ ಸಂಗತಿ. ಇಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಪೂರ್ಣ ಚರಿತ್ರೆಯಲ್ಲದಿದ್ದರೂ ಹಲವು ಪ್ರಮುಖ ಮೈಲಿಗಲ್ಲುಗಳನ್ನು ಗಮನಿಸಬಹುದು.

೧. ಮೊದಲ ಮುದ್ರಿತ ಕನ್ನಡ ಪುಸ್ತಕ ಎಂದು ಹೇಳಲಾದ ‘ಸಿರಿಗನ್ನಡ ನುಡಿಗನ್ನಡ’ ಪ್ರಕಟವಾದ (೧೮೩೯, ಪ್ರ: ಕೃಷ್ಣಮ್ಮಾಚಾರ್ಯ, ಶ್ರೀರಂಗಪಟ್ಟಣ) ಸುಮಾರು ೪೦ ವರ್ಷಗಳ ನಂತರ ಮೊದಲ ಜನಪ್ರಿಯ ವಿಜ್ಞಾನ ಪುಸ್ತಕ "ವ್ಯವಸಾಯ ಕ್ರಮ ಬೋಧಿನಿ" (೧೮೭೯, ಅನು: ರಾಮಸ್ವಾಮಿ ಶಾಸ್ತ್ರಿ, ಬೆಂಗಳೂರು) ಪ್ರಕಟಗೊಂಡಿತು. (ಸಿರಿಗನ್ನಡ ನುಡಿಗನ್ನಡಕ್ಕಿಂತ ಮುಂಚೆ ವ್ಯಾಕರಣ, ಶಬ್ದಕೊಶ ಮತ್ತಿತರ ಪ್ರಚಾರಕ್ಕೆ ಬಳಸುವ ಹೊತ್ತಿಗೆಗಳು ಸುಮಾರು ೧೮೧೭ರಿಂದಲೇ ಪ್ರಕಟಗೊಂಡಿರುತ್ತವೆ. ಹೆಚ್ಚಿನವು ಕ್ರೈಸ್ತ ಮಿಶನರಿಗಳಿಂದ ಮದರಾಸು, ಬಳ್ಳಾರಿ, ಮಂಗಳೂರು, ಬೆಂಗಳೂರು ಮತ್ತು ಬಂಗಾಳದಿಂದ ಪ್ರಕಟಗೊಂಡು ಸಾಕಷ್ಟು ಇಂಗ್ಲಿಷ್ ಮತ್ತು ತೆಲುಗು ಲಿಪಿಯನ್ನು ಬಳಸಿವೆ. ಅಲ್ಲದೆ ೧೭೮೦ ರಲ್ಲಿ ಮುಂಬಯಿಯಲ್ಲಿ ಮುದ್ರಿಸಲಾದ ೪೬ ಪುಟಗಳ ‘ಸಪ್ತ ಶತಿ‘ ಎಂಬ ಪುಸ್ತಕದ ಪ್ರತಿ ಹಮನಾಬಾದಿನ ಅಂಭಾಭವಾನಿ ಧೇವಸ್ಥಾನದ ಅರ್ಚಕರ ಬಳಿ ಇದೆ ಎಂದು ಇತ್ತೀಚೆಗೆ ತಿಳಿದುಬಂದಿದೆ). ಹತ್ತೊಂಬತ್ತನೆ ಶತಮಾನದ ಕಡೆಯ ಎರಡು ದಶಕಗಳು ಮತ್ತು ೨೦ನೇ ಶತಮಾನದ ಮೊದಲನೆಯ ದಶಕಗಳಲ್ಲಿ ವಿಶೇಷವಾಗಿ ಕೃಷಿ ವಿಜ್ಞಾನ ಮತ್ತು ವೈದ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳು ಪ್ರಕಟಗೊಂಡಂತೆ ತೋರುತ್ತದೆ.

೨. ಭೌತಶಾಸ್ತ್ರ ಅಧ್ಯಾಪಕ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ಪವನ ಶಾಸ್ತ್ರ ತಜ್ಞ ನಂಗಪುರಂ ವೆಂಕಟೇಶ ಅಯ್ಯಂಗಾರ್ ಅವರುಗಳ ಉತ್ಸಾಹೀ

ಪರಿಶ್ರಮದ ಫಲವಾಗಿ ೧೯೧೬ ರಲ್ಲಿ ಸ್ಥಾಪಿತವಾದ 'ಕರ್ನಾಟಕ ವಿಜ್ಞಾನ ಪ್ರಚಾರಣೇ ಸಮಿತಿ' (ಬೆಂಗಳೂರು) ಮತ್ತು ಅವರುಗಳೇ ೧೯೧೭ರಲ್ಲಿ ಆರಂಭಿಸಿದ ಪ್ರಥಮ ವಿಜ್ಞಾನ ಮಾಸಪತ್ರಿಕೆ 'ವಿಜ್ಞಾನ' ಜನಪ್ರಿಯ ವಿಜ್ಞಾನ ಸಾಹಿತ್ಯ ಚರಿತ್ರೆಯ ಮೊದಲ ಅತ್ಯಂತ ಮುಖ್ಯವಾದ ಘಟ್ಟ ಮತ್ತು ಅಂದಿನ ಪರಿಸ್ಥಿತಿಯನ್ನು ಗಮನಿಸಿದಾಗ ತುಂಬಾ ಸಾಹಸಪೂರ್ಣ ಕಾರ್ಯಗಳು.

೩. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘ ೧೯೩೨ರಲ್ಲಿ ಆರಂಭಿಸಿದ 'ಪ್ರಚಾರೋಪನ್ಯಾಸ ಮಾಲೆ' ಪುಸ್ತಕಗಳು ಮುಂದೆ ಪ್ರಾರಂಭಿಸಿದ 'ಪ್ರಸಾರಾಂಗ'ಕ್ಕೆ ಬೀಜಾಂಕುರವಾಗಿ ಜನಪ್ರಿಯ ವಿಜ್ಞಾನ ಪುಸ್ತಕಗಳು ಸೇರಿದಂತೆ ನೂರಾರು ಸುಲಭ ಬೆಲೆಯ ಪುಸ್ತಕಗಳನ್ನು ಹೊರತರಲು ನಾಂದಿಯಾಯಿತು. ಮುಂದೆ ಇದೇ ಮಾದರಿಯ ಪ್ರಸಾರಾಂಗ ಪ್ರಕಟಣೆಗಳು ರಾಜ್ಯದ ಇತರ ವಿಶ್ವವಿದ್ಯಾಲಯಗಳಲ್ಲಿ ಯತೇಚ್ಛವಾಗಿ ನಡೆದಿವೆ. ಇತ್ತೀಚಿನ ದಿನಗಳಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಸುಮಾರು ೪೦ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದೆ.

೪. ಸಂಘ ಸಂಸ್ಥೆಗಳಲ್ಲಿ ಹತ್ತಾರು ತಜ್ಞರು ಮಾಡಬಹುದಾದ್ದಕಿಂತ ಹೆಚ್ಚಿನ ಕಾರ್ಯವನ್ನು ಏಕಾಂಗಿಯಾಗಿ ಸಾಧಿಸಿದ ಡಾ॥ ಶಿವರಾಮ ಕಾರಂತರ ಮೂರು ಸಂಪುಟಗಳ 'ಬಾಲಪ್ರಪಂಚ' (೧೯೩೬) ಮತ್ತು ನಾಲ್ಕು ಸಂಪುಟಗಳ 'ವಿಜ್ಞಾನ ಪ್ರಪಂಚ' (೧೯೫೯–೬೪) ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ದೊರಕಿದ ಮಹತ್ತರ ಕೊಡುಗೆಗಳು.

೫. ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ವಿಜ್ಞಾನ ಕಾರ್ಯಕ್ರಮಗಳು, ತದನಂತರದ ಸುಮಾರು ೧೯೪೦ರ ದಶಕದ ಸೆಂಟ್ರಲ್ ಕಾಲೇಜು ಅಧ್ಯಾಪಕರ ವಿಜ್ಞಾನ ಪ್ರಚಾರ ಕಾರ್ಯಕ್ರಮಗಳು, ವಿಜ್ಞಾನ ಸಾಹಿತ್ಯದ ಒಂದು ವಾಹಿನಿಯನ್ನು ಪ್ರತಿನಿಧಿಸಿದರೆ, ಅದೇ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ವಿಜ್ಞಾನ ಕರ್ನಾಟಕ' ಪತ್ರಿಕೆಯ ಉದಯ ಮತ್ತು ಇದೇ ರೀತಿ ಇತರ ವಿಶ್ವವಿದ್ಯಾನಿಲಯಗಳಲ್ಲಿ ಆರಂಭಗೊಂಡ ವಿಜ್ಞಾನ ಪತ್ರಿಕೆಗಳು ಮತ್ತೊಂದು ವಾಹಿನಿಯಾಗಿ ವಿಜ್ಞಾನ ಸಾಹಿತ್ಯದ ಒಂದು ವಿಸ್ತರಣಾಕಾರ್ಯ ಮತ್ತು ಪತ್ರಿಕೆಗಳ ಘಟ್ಟವನ್ನು ಪ್ರತಿನಿಧಿಸುತ್ತವೆ.

೬. ಪ್ರಸ್ತುತ ಲಭ್ಯವಿರುವ ಪುಸ್ತಕಗಳಲ್ಲಿ ಅತೀ ಹೆಚ್ಚು ಅಂದರೆ ಸುಮಾರು ೨೨೫ ಪುಸ್ತಕಗಳನ್ನು ೧೯೭೦ರಲ್ಲಿ ಸ್ಥಾಪಿಸಿದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಹೆಚ್ಚು ಪ್ರಚಾರ ಗದ್ದಲಗಳಿಲ್ಲದೆ ಹೊರತಂದಿರುವುದು ಒಂದು ಮುಖ್ಯ ಅಂಶ.

೭. ಖಾಸಗಿ ಸಂಸ್ಥೆಗಳ ಪೈಕಿ ಬೆಂಗಳೂರಿನ ಐ.ಬಿ.ಹೆಚ್. ಮತ್ತು ನವಕರ್ನಾಟಕ ಪಬ್ಲಿಕೇಷನ್ಸ್ ಪ್ರಮುಖವಾದುವು. ನವಕರ್ನಾಟಕ ಒಟ್ಟು ಪ್ರಕಟಿಸಿರುವ ೧೩೦೦ ಪುಸ್ತಕಗಳಲ್ಲಿ ಸುಮಾರು ೧೬೦ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಇದುವರೆವಿಗೆ ಹೊರತಂದಿರುವುದಲ್ಲದೆ ವ್ಯವಸ್ಥಿತವಾದ ವಿತರಣೆ ಮತ್ತು ಮಾರಾಟ ಜಾಲ ಹೊಂದಿದ್ದು ಪರಿಣಾಮಕಾರಿಯಾಗಿ ಮಾರಾಟ ಮಾಡಿರುವುದು ಗಮನಾರ್ಹ. ಜೊತೆಗೆ ಕಾರಂತರ 'ಬಾಲಪ್ರಪಂಚ' ಮತ್ತು 'ವಿಜ್ಞಾನ ಪ್ರಪಂಚ'ದಿಂದ ಆರಂಭಗೊಂಡ ವಿಜ್ಞಾನ ವಿಶ್ವಕೋಶಗಳ ಪರಂಪರೆ ಬೆಂಗಳೂರು ವಿಶ್ವವಿದಾಲಯದ 'ಜ್ಞಾನ ಗಂಗೋತ್ರಿ'ಯ ಕೆಲವು (೪) ಸಂಪುಟಗಳನ್ನೂ ಸೇರಿಸಿಕೊಂಡಂತೆ ಇತ್ತೀಚಿನ ನವಕರ್ನಾಟಕದ ಆಧುನಿಕ, ವರ್ಣರಂಜಿತ ಮತ್ತು ಸುಂದರವಾದ 'ಜ್ಞಾನ ವಿಜ್ಞಾನ ಕೋಶ' (೧೯೯೮)ದ ವರೆಗೆ ಪ್ರವಹಿಸಿರುವುದು ಒಂದು ಹೆಮ್ಮೆಯ ಸಂಗತಿ.

೮. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ೧೯೭೮ರಲ್ಲಿ ಆರಂಭಿಸಿದ ಮಾಸಿಕ 'ಬಾಲ ವಿಜ್ಞಾನ' ಮತ್ತು ಅದರೊಂದಿಗೆ ೧೯೮೦ರಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ (ಕ.ರಾ.ವಿ.ಪ) ಕಳೆದ ಎರಡು ದಶಕಗಳಲ್ಲಿ ಸಾಕಷ್ಟು ಜನಪ್ರಿಯ ವಿಜ್ಞಾನ ಕಾರ್ಯಕ್ರಮಗಳನ್ನ ನಡೆಸಿಕೊಂಡು ಬಂದಿರುವುದರ ಜೊತೆಗೆ ಸುಮಾರು ೫೦ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿ ಯಶಸ್ವಿಯಾಗಿ ಪ್ರಚಾರ, ವಿತರಣೆ, ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಮಾಡಿದೆ. ಈ ಹಿಂದೆ ಹೆಸರಿಸಿದ ವಿಜ್ಞಾನ ನಿಯತಕಾಲಿಕೆಗಳ ವಾಹಿನಿಗೆ ಈಗಲೂ ಪ್ರಕಟಗೊಳ್ಳುತ್ತಿರುವ 'ಬಾಲ ವಿಜ್ಞಾನ' ಮತ್ತು ಕನ್ನಡ ವಿಶ್ವವಿದ್ಯಾಲಯದ ಇತ್ತೀಚಿನ ವರ್ಷಗಳಲ್ಲಿ ಆರಂಬಿಸಿದ 'ವಿಜ್ಞಾನ ಸಂಗಾತಿ' ಪತ್ರಿಕೆಗಳು ಬಹು ಮುಖ್ಯವಾದ ಸೇರ್ಪಡೆ.

ಕಳೆದ ಎರಡು ದಶಕಗಳ ಬೆಳವಣಿಗೆಗೆ ರಾಷ್ಟ್ರ ಮಟ್ಟದಲ್ಲಿ ಮತ್ತು ನೆರೆ ರಾಜ್ಯಗಳಲ್ಲಿ (ಭಾಷೆಗಳಲ್ಲಿ) ನಡೆದ ಹಲವಾರು ಕಾರ್ಯಕ್ರಮಗಳು ಮತ್ತು ಪ್ರಯೋಗಗಳು ಪ್ರೇರಣೆಯಾಗಿವೆ. ಅವುಗಳಲ್ಲಿ ಮುಖ್ಯವಾಗಿ ಕೇರಳ ಶಾಸ್ತ್ರ ವಿಜ್ಞಾನ ಪರಿಷತ್ ಪ್ರೇರಣೆಯಿಂದ ಆರಂಭಗೊಂಡ ಕ.ರಾ.ವಿ.ಪ. ಮತ್ತು ಇತರ ರಾಜ್ಯಗಳಲ್ಲಿ ಅಂತಹ ೨೫ ಸಂಸ್ಥೆಗಳು, ಭಾರತ ಜನ ವಿಜ್ಞಾನ ಜಾಥಾ (೧೯೮೭), ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಂವಹನದ ರಾಷ್ಟ್ರೀಯ ಸಮಿತಿ (N.C.S.T.C), ೩೫ ಸದಸ್ಯ ಸಂಸ್ಥೆಗಳನ್ನು ಹೊಂದಿರುವ ಅಖಿಲ ಭಾರತ ಜನತಾ ವಿಜ್ಞಾನ ಸಂಪರ್ಕ ಜಾಲ (೧೯೯೦), ಅಖಿಲ ಭಾರತ ಜನತಾ ವಿಜ್ಞಾನ ಕಾಂಗ್ರೇಸ್ (೧೯೮೮, ೧೯೯೦) ಮತ್ತು ೧೯೯೦ರಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಸಾಕ್ಷರತಾ ಆಂದೋಲನಕ್ಕಾಗಿ ರಚಿಸಿದ ಭಾರತ ಜ್ಞಾನ ವಿಜ್ಞಾನ ಸಮಿತಿ (B.C.V.S) ಮತ್ತು ಅದೇ ಇಲಾಖೆ ನಡೆಸಿದ ಭಾರತ ಜ್ಞಾನ ವಿಜ್ಞಾನ ಜಾಥ ಮುಖ್ಯವಾದುವು. ಕ.ರಾ.ವಿ.ಪ. ದ ಮಾದರಿಯಲ್ಲಿ ವೈದ್ಯ ಶಾಸ್ತ್ರ ಮತ್ತು ಗಣಕ ವಿಜ್ಞಾನ ಪರಿಷತ್ತಗಳೂ ಇತ್ತಿಚಿನ ವರ್ಷಗಳಲ್ಲಿ ಕಾರ್ಯೊನ್ಮುಕವಾಗಿವೆ.

***ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳ ಲಭ್ಯತೆ:*** ಜನಪ್ರಿಯ ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ಸ್ಥೂಲ ಪರಿಚಯದಿಂದ ಕನ್ನಡದಲ್ಲಿ ನೂರಾರು ವಿಜ್ಞಾನ ಲೇಖಕರು ಮತ್ತು ಪ್ರಕಾಶಕರು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು, ಸುಮಾರು ೩೦೦೦ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿರುವುದು, (ಇವುಗಳ ವಿವರಣೆಯುಳ್ಳ ವಿಧ್ಯುನ್ಮಾನ ಗ್ರಂಥಸೂಚಿಯನ್ನು ಪ್ರಕಟಿಸುವುದಾಗಿ ಕ. ರಾ. ವಿ. ಪ. ಹೇಳಿದೆ) ಒಂದು ರೀತಿಯಲ್ಲಿ ಲೇಖಕವರ್ಗ ಮತ್ತು ಪ್ರಕಾಶಕವರ್ಗ ನಮ್ಮ ಅಭಿನಂದನೆಗೆ ಅರ್ಹರು ಅನ್ನಿಸಿದರೂ ಕೆಲವು ನ್ಯೂನತೆಗಳನ್ನೂ ಗಮನಿಸಬಹುದು. ಮೊದಲನೆಯದಾಗಿ ಲೇಖಕರಲ್ಲಿ ಬಹುತೇಕ ವಿಜ್ಞಾನದ ಅಧ್ಯಾಪಕರಾಗಿದ್ದು, ತಜ್ಞರು ಮತ್ತು ಸಂಶೋದಕ–ವಿಜ್ಞಾನಿಗಳು ಜನಪ್ರಿಯ ವಿಜ್ಞಾನ ಸಾಹಿತ್ಯದ ಬಗ್ಗೆ ಮಡಿವಂತಿಕೆ ತೋರಿಸಿದಂತಿದೆ. ಇದರಿಂದಾಗಿ ವಿಜ್ಞಾನಿಗಳ ಮತ್ತು ನಾಗರೀಕರ ನಡುವಣ ಅಂತರವನ್ನು ಕಡಿಮೆ ಮಾಡುವ ಉದ್ದೇಶ ಅಷ್ಟಾಗಿ ಈಡೇರಿದಂತೆ ಕಾಣದು. ಎರಡನೆಯದಾಗಿ, ತಂತ್ರಜ್ಞಾನಕ್ಕೆ ಸಂಬಂದಿಸಿದ ಪುಸ್ತಕಗಳು ಬಹಳ ಕಡಿಮೆ ಮತ್ತು ಅವು ಇತ್ತೀಚಿಗಷ್ಟೇ ಬರತೊಡಗಿವೆ. ಮೇಲಾಗಿ ಇತರ ಮಾಧ್ಯಮಗಳಿಗೆ ಅಳವಡಿಸಬಹುದಾದ (ನಾಟಕ, ಪ್ರಯೋಗ, ಪ್ರಾತ್ಯಕ್ಷಿತೆ, ಇತ್ಯಾದಿ) ಪುಸ್ತಕಗಳು, ವೈಜ್ಞಾನಿಕ ಕಥೆ ಕಾದಂಬರಿಗಳು ಮತ್ತು ಕಸುಬಿಗೆ ನೆರವಾಗುವ ತಂತ್ರಜ್ಞಾನ ಪುಸ್ತಕಗಳು ತೀರ ಕಡಿಮೆ. ಮೂರನೆಯದಾಗಿ ವಿಷಯದ ಆಯ್ಕೆಯಲ್ಲಿ ಶ್ರೀಸಾಮಾನ್ಯನ ಅವಶ್ಯಕತೆಗಳ ನಿರ್ಧಾರ ಮತ್ತು ಈಗಾಗಲೆ ಪ್ರಕಟಿಸಿರುವ ಪುಸ್ತಕಗಳ ಪರಿಶೀಲನೆ ಸಮರ್ಪಕವಾಗಿ ನಡೆಯುತ್ತಿಲ್ಲ. ನಾಲ್ಕನೆಯದಾಗಿ ತುರ್ತು ಭಾಷಾಂತರಗಳು, ಸರ್ಕಾರದ ಸಗಟು ಖರೀದಿಯನ್ನು ಗಮನದಲ್ಲಿಟ್ಟು ಬರೆದ ಪುಸ್ತಕಗಳು ಮತ್ತು ತಜ್ಞರಲ್ಲದವರಿಂದ ಬರೆಯಿಸಿದ ಪುಸ್ತಕಗಳೂ ಹೇರಳವಾಗಿವೆ. ಹೀಗಾಗಿ ಲಭ್ಯವಿರುವ ಕೆಲವು ಪುಸ್ತಕಗಳ ಗುಣಮಟ್ಟ ಪ್ರಶ್ನಾರ್ಹ ಎನ್ನುವ ಮಾತಿದೆ. ಹಲವಾರು ತಜ್ಞರು ಕನ್ನಡ ವಿಜ್ಞಾನ ಸಾಹಿತ್ಯ ರಚನೆಯಲ್ಲಿನ ತೊಡಕುಗಳು ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ ಚರ್ಚಿಸಿ ಮಾರ್ಗದರ್ಶನಮಾಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಆದರೆ ಶ್ರೀಸಾಮಾನ್ಯನಿಗೆ ಪುಸ್ತಕ ಆಯ್ಕೆಯಲ್ಲಿ ನೆರವಾಗಬಹುದಾದ ವಿಮರ್ಶೆಗಳು, ವಿಶ್ಲೇಷಣೆಗಳು ಮತ್ತು ಇತರ ಮೌಲ್ಯಮಾಪನಕಾರ್ಯ ಜನಪ್ರಿಯ ವಿಜ್ಞಾನ ಪುಸ್ತಕಗಳ ಬಗ್ಗೆ ಅಷ್ಟಾಗಿ ನಡೆದಿಲ್ಲ. ವಿಷಯ ಮತ್ತು ರೂಪಗಳ ವೈವಿದ್ಯತೆಯೂ ಕಡಿಮೆ. ಕಡೆಯದಾಗಿ ಜನಪ್ರಿಯ ವಿಜ್ಞಾನ ಸಾಹಿತ್ಯವನ್ನೆ ಸಾಹಿತ್ಯೇತರ ಎಂದೊ ಅಥವ ಸೃಜನೇತರ ಎಂದೊ ಪರಿಗಣಿಸುವ ಒಟ್ಟು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮಟ್ಟದಲ್ಲಿ ಸಾಕಷ್ಟು ಪ್ರಶಸ್ತಿ, ಪುರಸ್ಕಾರ ಮತ್ತು ಉತ್ತೇಜನ ಜನಪ್ರಿಯ ವಿಜ್ಞಾನ ಲೇಖಕರಿಗೆ ಇಲ್ಲ. ಅಲ್ಲದೆ ಸಾಹಿತ್ಯ ಸಮ್ಮೇಳನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಾಹಿತ್ಯದ

ಗೋಷ್ಠಿಯ ಅವಶ್ಯಕತೆ ಇದೆ.

ಬೆಂಗಳೂರಿನಲ್ಲೇ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಹತ್ತಾರು ಹೆಸರಾಂತ ಸಂಸ್ಥೆಗಳಿವೆ ಮತ್ತು ಅವುಗಳೆಲ್ಲವೂ ತಮ್ಮದೇ ಆದ ವಿಶಿಷ್ಟ ಗ್ರಂಥಾಲಯಗಳನ್ನು ಹೊಂದಿವೆ. ಈ ಗ್ರಂಥಾಲಯಗಳು ಇಂಗ್ಲೀಷ್‌ಬಾರದ ಸಿ ಮತ್ತು ಡಿ ದರ್ಜೆ ನೌಕರರಿಗಾಗಿ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳ ಸಂಗ್ರಹವನ್ನು ಇಂಗ್ಲಿಷ್ (ಮತ್ತು ಕೇಂದ್ರ ಸರ್ಕಾರ ಸಂಸ್ಥೆಗಳಾದರೆ ಹಿಂದಿ) ಭಾಷೆ ಜೊತೆಗೆ ಕನ್ನಡದಲ್ಲಿಯೂ ಬೆಳೆಸಬೇಕು ಮತ್ತು ಇಂತಹ ಗ್ರಂಥಗಳನ್ನು ವ್ಯಾಪಕವಾಗಿ ಉಪಯೋಗಿಸಲು ಓದುಗರನ್ನು ಉತ್ತೇಜಿಸಬೇಕು. ಈ ನಿಟ್ಟಿನಲ್ಲಿ ಬೆಂಗಳೂರಿನ ಕೇಂದ್ರ ಸರ್ಕಾರದ ಸಂಶೋಧನಾ ಸೊಂಸ್ಥೆಯೊಂದರ ಗ್ರಂಥಾಲಯದಲ್ಲಿ ಇಂತಹ ಸುಮಾರು ೫೦೦ ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಕನ್ನಡ ಪುಸ್ತಕಗಳಿದ್ದು, ಇವೆಲ್ಲವುಗಳ ವಿವರ ಸಂಸ್ಥೆಯ ಕಂಪ್ಯೂಟೆರ್‌ಜಾಲದಲ್ಲಿ ದೇಶಾದ್ಯಂತ ಪಡೆಯಬಹುದಾಗಿದೆ. ಅಲ್ಲದೆ ಈ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಗ್ರಂಥಾಲಯವು ಅಗಿಂದಾಗ್ಗೆ ಪ್ರಕಟಿಸಿ, ಕನ್ನಡ ರಾಜ್ಯೋತ್ಸವ ಮತ್ತು ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ದಿವಸಗಳಂದು ಪುಸ್ತಕ ಪ್ರದರ್ಶನ ಏರ್ಪಡಿಸಿ ಗ್ರಂಥಾಲಯಗಳಿಂದ ಅತೀ ಹೆಚ್ಚು ಪುಸ್ತಕಗಳನ್ನು ಎರವಲು ಪಡೆದ ಓದುಗರನ್ನು ಪುರಸ್ಕರಿಸಲಾಗುವುದು.

ಇತ್ತೀಚಿನ ವರ್ಷಗಳಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ಬೊಧಿಸುವುದನ್ನು ಕಡ್ಡಾಯ ಮಾಡಿರುವುದು ಸ್ವಾಗತಾರ್ಹ (ಆದರೆ ಈ ವಿಷಯ ಪರೀಕ್ಷೆಗಿರುವುದಿಲ್ಲ!). ಈ ಪಠ್ಯದಲ್ಲಿ ಜನಪ್ರಿಯ ತಂತ್ರಜ್ಞಾನ ಪಾಠಗಳನ್ನು ಅಳವಡಿಸುವುದು ಸೂಕ್ತ. ಇಂದಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಕೆಲವರಾದರೂ ಜನಪ್ರಿಯ ತಂತ್ರಜ್ಞಾನವನ್ನು ಮುಂದೆ ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವಂತಾಗಲಿ. ಆದರೆ ಇಂಜಿನಿಯರಿಂಗ್ ಕಾಲೇಜುಗಳ ಗ್ರಂಥಾಲಯಗಳಲ್ಲಿ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳಿಲ್ಲ.

ನಮ್ಮ ಲೇಖಕರ ಪರಿಶ್ರಮ ಸಾರ್ಥಕಗೊಳಿಸಲು ಪುಸ್ತಕ ಪ್ರಕಟಗೊಂಡು ಸಮರ್ಥವಾಗಿ ವಿತರಣೆ ಮತ್ತು ಮಾರಾಟವಾದಾಗ ಮಾತ್ರ ಸಾದ್ಯ. ಅಂದರೆ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಶ್ರೀಸಾಮಾನ್ಯನಿಗೆ ಸುಲಭದಲ್ಲಿ ತಲುಪ ಬೇಕಾದರೆ ಪ್ರಚಾರ, ವಿತರಣೆ ಮತ್ತು ಮಾರಾಟ ವ್ಯವಸ್ಥೆಯನ್ನು ಬಹಳಷ್ಟು ಬಲಪಡಿಸಬೇಕಾಗಿದೆ. ಕೆಲವು ನಗರಗಳಲ್ಲಿರುವ ಮಾರಾಟಮಳಿಗೆ ಮತ್ತು ಯಾವಾಗಲಾದರೊಮ್ಮೆ ನಡೆಸುವ ಪುಸ್ತಕ ಪ್ರದರ್ಶನಗಳನ್ನ ಬಿಟ್ಟರೆ ಪುಸ್ತಕಗಳನ್ನು ಶ್ರೀಸಾಮಾನ್ಯನ ಹತ್ತಿರಕ್ಕೆ ಕೊಂಡೊಯ್ಯುವ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಈ ನಿಟ್ಟಿನಲ್ಲಿ ಪುಸ್ತಕೋದ್ಯಮ ಬಹಳಷ್ಟು ಶ್ರಮಿಸಬೇಕಿದೆ. ಅಲ್ಪ ಸ್ವಲ್ಪ ಸಾಧನೆಯಾಗಿದ್ದರೆ ಅದು ಕೆಲವೇ ಕೆಲವು ಪ್ರತಿಷ್ಠಿತ ಖಾಸಗಿ ಪ್ರಕಾಶಕರಿಂದ ಮಾತ್ರ. ಸರ್ಕಾರದ ಸಗಟು ಖರೀದಿಯನ್ನೆ ಗಮನದಲ್ಲಿ ಇಟ್ಟು ಕೊಂಡ ಪ್ರಕಾಶಕರಿಂದ ಒಳ್ಳೆಯ ಗುಣಮಟ್ಟದ ಪುಸ್ತಕಗಳನ್ನಾಗಲಿ ಅಥವ ಸಮರ್ಥ ಪ್ರಚಾರ, ವಿತರಣೆ ಮತ್ತು ಮಾರಾಟವನ್ನಾಗಲಿ ನಿರೀಕ್ಷಿಸಲಾಗದು. ಇನ್ನು ಸರ್ಕಾರದ ಅಂಗ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆದ ಪ್ರಕಾಶಕರು ಪ್ರಚಾರ, ವಿತರಣೆ ಮತ್ತು ಮಾರಾಟದ ಮಹತ್ವವನ್ನೇ ಅರಿತಂತಿಲ್ಲ. ಈ ವ್ಯವಸ್ಥೆಯನ್ನು ಒಂದು ಅನಾವಶ್ಯಕ ಲಾಭಕೋರ ಮದ್ಯವರ್ತಿ ವ್ಯವಸ್ಥೆ ಎಂದು ತಪ್ಪಾಗಿ ಅರ್ಥೈಸಿ ವಕ್ರ ದೃಷ್ಟಿಯಿಂದ ನೋಡುವ ಪರಿಪಾಠ ನಿಲ್ಲಿಸಿ ಅಂತಹ ವ್ಯವಸ್ಥೆಯನ್ನು ಆಧುನಿಕ ಪುಸ್ತಕೋದ್ಯಮದ ಆಡಳಿತ ಪರಿಕ್ರಮ ಎಂದು ಪರಿಗಣಿಸ ಬೇಕಿದೆ.

ನೂರಾರು ಏಕವ್ಯಕ್ತಿ ಪ್ರಕಾಶನಗಳು ಕನಿಷ್ಠ ಒಂದು ಸಹಕಾರ ಸಂಘದಂತಹ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳದೆ ಪುಸ್ತಕಗಳ ಬಗೆಗಿನ ಮಾಹಿತಿಯನ್ನ ಪಟ್ಟಿಗಳ ಮೂಲಕ ನಾಡಿನ ಉದ್ದಗಲಕ್ಕೂ ಪ್ರಸಾರ ಮಾಡದೆ, ಅಂಚೆ ಮೂಲಕವಾದರೂ ವ್ಯವಹರಿಸದೆ ಓದುಗರನ್ನ ನೇರವಾಗಿ ತಲುಪಲಾಗುವುದಿಲ್ಲ. ಗ್ರಾಮಾಂತರ ಓದುಗರಿಗೆ ಹೆಚ್ಚು ಹೆಚ್ಚು ಪುಸ್ತಕದ ಅಂಗಡಿಗಳ ಮತ್ತು ಪ್ರದರ್ಶನಗಳ ಅವಶ್ಯಕತೆ ಪೂರೈಸದೆ ಅವರು ಪುಸ್ತಕ ಕೊಳ್ಳುತ್ತಿಲ್ಲ ಎಂದು ದೂರುವುದು ಸರಿಯಲ್ಲ.

ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಶ್ರೀಸಾಮಾನ್ಯನ್ನು ತಲುಪಲು ಬಹುಮುಖ್ಯ ವಾಹಿನಿಯಾಗಬೇಕಿದ್ದ ಸಾರ್ವಜನಿಕ ಗ್ರಂಥಾಲಯಗಳು ಈ ದಿಶೆಯಲ್ಲಿ ಯಾವ ಮಹತ್ತರ ಯೋಜನೆಯನ್ನೂ ಇಟ್ಟುಕೊಳ್ಳದೆ ಶೋಚನಿಯ ಸ್ಥಿತಿಯಲ್ಲಿವೆ. ಈ ಗ್ರಂಥಾಲಯಗಳು ಜನಸಂಖ್ಯೆಯ ಶೇ ೧.೩೧ ರಷ್ಟು ಸದಸ್ವತ್ವವನ್ನು ಹೊಂದಿವೆ. ಈ ಗ್ರಂಥಾಲಯಗಳ ಗ್ರಂಥ ಸಂಗ್ರಹಣೆಯ ಗುಣಮಟ್ಟವನ್ನ ಸರ್ವೇಕ್ಷಣಗಳು ನಿರ್ದಾಕ್ಷಿಣ್ಯವಾಗಿ ಕಳಪೆ ಎಂದು ಸಾರಿವೆ. ಆದ್ದರಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಶೀಘ್ರವೇ ಶಾಖೆಗಳನ್ನ ಹೆಚ್ಚಿಸುವುದರ ಜೊತೆಗೆ ಸದಸ್ಯತ್ವವನ್ನು ಹೆಚ್ಚಿಸಬೇಕು ಮತ್ತು ಅತೀ ಮುಖ್ಯವಾಗಿ ಪುಸ್ತಕ ಸಂಗ್ರಹಣೆಯನ್ನ ಬಲಪಡಿಸಬೇಕು. ಸಾರ್ವಜನಿಕ ಗ್ರಂಥಾಲಯಗಳ ಮೂಲಕ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳನ್ನು ಶ್ರೀಸಾಮಾನ್ಯನಿಗೆ ತಲುಪಿಸಲು ವಿಫಲವಾಗಿರುವುದರಿಂದ ಹಲವು ಕಾರ್ಯಗಳು ತುರ್ತಾಗಿ ಆಗಬೇಕಿದೆ. ಮೊದಲನೆಯದಾಗಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಸಮಗ್ರ ಗ್ರಂಥಸೂಚಿಯನ್ನು ನಿಯೋಜಿಸುವಲ್ಲಿ ನಿರಾಸಕ್ತಿ ತೋರಿಸದೆ ಕಾರ್ಯ ಪ್ರವೃತ್ತವಾಗಬೇಕು. ಎರಡನೆಯದಾಗಿ ಸಮಗ್ರ ಗ್ರಂಥ ಸಂಗ್ರಹಣೆಯ ಜವಾಬ್ದಾರಿಯನ್ನ ನಿಭಾಯಿಸಲು ಪಣತೊಡಬೇಕಿದೆ. ಮೂರನೆಯದಾಗಿ ಈಗ ಪ್ರಚಲಿತವಿರುವ ಸಗಟು ಖರೀದಿ ಮಾರ್ಗವನ್ನ ಸಂಪೂರ್ಣ ಪರಿಷ್ಕರಿಸಿ ಓದುಗರು ಮತ್ತು ಗ್ರಂಥಾಲಯ ಸಿಬ್ಬಂದಿ ಪುಸ್ತಕಗಳ ಆಯ್ಕೆಯ ಕಾರ್ಯದಲ್ಲಿ ಸಕ್ರಿಯ ಪಾತ್ರದಾರಿಗಳಾಗಲು ಅನುವು ಮಾಡಿಕೊಡಬೇಕು. ನಾಲ್ಕನೆಯದಾಗಿ ಕಾಯಿದೆಯನ್ವಯ ಪ್ರಕಟಿತ ಪುಸ್ತಕಗಳ ಪ್ರತಿಗಳನ್ನ ರಾಜ್ಯ ಕೇಂದ್ರ ಗ್ರಂಥಾಲಯ ಪಡೆದು ಕೊಳ್ಳಲು ಹಲವು ಉತ್ತೇಜಿತ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಬೇಕು ಮತ್ತು ಈ ಕಾಯ್ದೆ ಜಾರಿಗೆ ತರುವಾಗ ಸಾರ್ವಜನಿಕ ಇಲಾಖೆ ಒಂದು ತೆರಿಗೆ ಇಲಾಖೆಯಂತೆ ವರ್ತಿಸಬಾರದು. ಕನ್ನಡದಲ್ಲೆ ವ್ಯವಹರಿಸುವ ಹಾಗೂ ಕಲಿಯುವ ಗ್ರಾಮಾಂತರ ಪ್ರದೇಶಗಳಲ್ಲಿ ಓದಲು ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಮತ್ತು ತಂತ್ರಜ್ಞಾನ ಪುಸ್ತಕಗಳು ಹೇರಳವಾಗಿ ದೊರೆಯುವಂತೆ ಮಾಡುವುದು ಉಚಿತ.

-------------

* *ಕನ್ನಡ ಪ್ರಭ*, ಸೆಪ್ಟಂಬರ್ ೧೦, ೨೦೦೫, ಪು. ೬.

# ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ 36 ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು 4 ಪುಸ್ತಕಗಳು ಮತ್ತು 81 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ 5 ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ 19 ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು 44 ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in ; **Phone:** 91-80-25084451; **Fax:** 91-80-25084475.